# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

ನಂ.ನಅಪ್ರಾತು/ಯೋ/ಏಕ ನಿವೇಶನ/69/ನಕ್ಷೆ ದೃಢೀಕರಣ/2013-14 ದಿನಾಂಕ: 31-5-14

## ಏಕ ನಿವೇಶನ ವಿನ್ಯಾಸ ಮಂಜೂರಾತಿ ಆದೇಶ

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 149/3 ರಲ್ಲಿ ವಿಸ್ತೀರ್ಣ 0-17 ಗುಂಟೆ ಪ್ರದೇಶಕ್ಕೆ ಶ್ರೀಮತಿ ಷಂಷುನ್ನೀಸಾ ಇವರ ಪರವಾಗಿ ಕೈಗಾರಿಕಾ ಉಪಯೋಗಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :
1. ಅರ್ಜಿದಾರರ ಅರ್ಜಿ ದಿನಾಂಕ 14-11-2013.
2. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/03/2008-09 ದಿನಾಂಕ 01-12-2008
3. ದಿನಾಂಕ 06-02-2014 ರಂದು ನಿಗಧಿಪಡಿಸಿ ದಿನಾಂಕ 22-02-2014 ರಂದು ಮುಂದುವರೆದ ಸಭೆಯ ವಿಷಯ ಸಂಖ್ಯೆ 104 ರ ನಿರ್ಣಯ.
4. ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕ, ಸ್ಲಂಸೆಸ್ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕ ಪಾವತಿಸಿದ ದಿನಾಂಕ 04-04-2014 ರಸೀತಿ ಸಂಖ್ಯೆ 32080 ರೂ.2,31,685-00 (ಎರಡು ಲಕ್ಷದ ಮೂವತ್ತೊಂದು ಸಾವಿರದ ಆರು ನೂರ ಎಂಭತ್ತೈದು ರೂಪಾಯಿಗಳು ಮಾತ್ರ)

* * * * *

ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ (1) ರ ತಮ್ಮ ಕೋರಿಕೆಯ ಮೇರೆಗೆ ಉಲ್ಲೇಖ (3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 149/3 ರಲ್ಲಿ ವಿಸ್ತೀರ್ಣ 0-17 ಗುಂಟೆ ಪ್ರದೇಶಕ್ಕೆ ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಉಲ್ಲೇಖ (4) ರಲ್ಲಿ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಶ್ರೀಮತಿ ಷಂಷುನ್ನೀಸಾ ಇವರ ಪರವಾಗಿ ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದಿಸಲಾಗಿದೆ.

## ಷರತ್ತುಗಳು:-

1. ಪ್ರಸ್ತಾವಿತ ಪ್ರದೇಶವನ್ನು ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸವಾಗಿ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1991 ರ ಕಲಂ 17 ರಂತೆ ಈ ಕಛೇರಿಯ ಪೂರ್ವಾನುಮತಿ ಪಡೆಯತಕ್ಕದ್ದು.
2. ಕಟ್ಟಡ ಇತ್ಯಾದಿ ಕಾಮಗಾರಿಯನ್ನು ಕೈಗೊಳ್ಳುವ ಮುನ್ನಾ ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕ್ರಮ ಬದ್ಧ ಪರವಾನಗಿ (ಲೈಸನ್ಸ್) ಯನ್ನು ಪಡೆಯತಕ್ಕದ್ದು.
3. ಸಿವಿಲ್ ವ್ಯಾಜ್ಯಗಳಿಗೆ, ತಪ್ಪು ಮಾಹಿತಿ / ದಾಖಲೆಗಳಿಗೆ ಪ್ರಾಧಿಕಾರವು ಜವಾಬ್ದಾರಿಯಲ್ಲ.
4. ರಸ್ತೆಯು ಮಂಜೂರಾಗಿರುವ ಪ್ರಕಾರ ಕನಿಷ್ಠ 30 ಮೀಟರ್ ಅಗಲವಿರುವಂತೆ ನೋಡಿಕೊಳ್ಳಬೇಕು. ಆದುದರಿಂದ ರಸ್ತೆ ಮಧ್ಯದಿಂದ 15 ಮೀಟರ್ ಅಗಲದ ನಂತರ ಕಾಂಪೌಂಡ್ ಕಟ್ಟಬೇಕು.
5. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
7. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾಂತಾನೆ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳಲಾಗುವುದು.
8. ನಕ್ಷೆಯಲ್ಲಿ ಮೀಸಲಿರಿಸುವ ಉದ್ಯಾನವನ ಹಾಗೂ ವಾಹನ ನಿಲುಗಡೆಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಮಾಲೀಕರೇ ಅಭಿವೃದ್ಧಿ ಪಡಿಸುವುದು ಹಾಗೂ ಸದರಿ ಜಾಗವನ್ನು ಇನ್ನಿತರೇ ಯಾವುದೇ ಉದ್ದೇಶಕ್ಕೆ ಬಳಸುವಂತಿಲ್ಲ.
9. ಸದರಿ ವಿನ್ಯಾಸದಲ್ಲಿನ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾಗಲಿ ಅಥವಾ ಈ ಅನುಮೋದನೆ ಸಂಬಂಧ ನೀಡಲಾದ ದಾಖಲಾತಿ / ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ ಈಗ ನೀಡಲಾದ ಅನುಮತಿಯು ತಾನೇ ತಾನಾಗಿ ರದ್ದಾಗುತ್ತದೆ ಎಂದು ಭಾವಿಸತಕ್ಕದ್ದು.

ರವಾನಿಸಿದೆ........ 31-5-14

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಶ್ರೀಮತಿ ಷಂಷುನ್ನೀಸಾ
ಕೋಂ ಅಬ್ದುಲ್ ಗಫರ್ ಬೇಗ್
ಕರ್ನಾಟಕ ಸ್ಟೀಲ್
ಗುಬ್ಬಿಗೇಟ್ ಹತ್ತಿರ,
ತುಮಕೂರು.

ಪ್ರತಿಯನ್ನು :-
ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.




**APPLICANT**: Sham Shunisa

**SMT. SHAMSHUNNISA**




KEY-PLAN
NOT-TO-SCALE

APPROVED LAY-OUT BOUNDARY. EXTENT OF 0A-17 GUNTA

LAND USE ANALYSIS

| SLNOS | LAND USE | AREA IN SQM | PERCENTAGE |
|---|---|---|---|
| 1 | INDUSTRIAL | 1461.69 | 85.00 % |
| 2 | PARK | 172.09 | 10.00 % |
| 3 | PARKING | 86.11 | 05.00 % |
| | TOTAL | 1719.89 | 100.00 % |




SCALE=1:600

# GOVERNMENT OF KARNATAKA
## TUMKUR URBAN DEVELOPMENT AUTHORITY
## TUMKUR

29/5/14

TOWN PLANNING MEMBER
TUDA
TUMKUR

29/5/14

COMMISSIONER
TUDA
TUMKUR

| TCD BY: | CHD BY: | DNG NO: |
|---|---|---|

TITTLE: APPROVED SINGLE PLOT INDUSTRIAL LAY-OUT PLAN IN SY.NO. 149/3 EXTENT OF 0A-17 GUNTA AT TUMKUR AMANIKERE TUMKUR KASABA TUMKUR.